SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –30 ದಿನಾಂಕ : 05–02–2025

## ದಿನಾಂಕ: 29.01.2025 ರ ವಾರದ ಸಭೆಯ ವರದಿ

**ದಿನಾಂಕ : 05.02.2025 ರಂದು ನಮ್ಮ ವಾರದ ಸಭೆಯು ಕ್ಲಬ್ ಅಫೇರ್ಸ್ ಮತ್ತು ಇತ್ತೀಚೆಗೆ ನಡೆದ ರೋಟರಿ ಜಿಲ್ಲಾ ಸಮ್ಮೇಳನದ ಬಗ್ಗೆ ನೆನಪುಗಳನ್ನು ಹಂಚಿಕೊಳ್ಳುವ ಸಭೆಯಾಗಿತ್ತು. ಅಂದು ವೇದಿಕೆಯ ಮೇಲೆ ಕ್ಲಬ್ ಸರ್ವಿಸ್ ಸಮಿತಿ ಚೇರ್ಮನ್ ರೊ. ವೀರಣ್ಣ ಎ.ಹುಗ್ಗಿ, ಅಧ್ಯಕ್ಷರಾದ ರೊ. ಕೆ.ಸೂರ್ಯನಾರಾಯಣ ಉಡುಪರು ಕಾರ್ಯದರ್ಶಿ ರೊ.ಎನ್. ಜಿ ಉಷಾರವರು ಉಪಸ್ಥಿತರಿದ್ದರು.**













ಸಭೆಗೆ ಮುನ್ನ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿದರು. ಸಭೆಯಲ್ಲಿ ಪ್ರಥಮವಾಗಿ ಶ್ರೀಮತಿ ಮಲ್ಲಿಕಾ ವಿ. ಜೋಯ್ಸ್‌ರವರಿಂದ “ಸುಂದರಿ, ತ್ರಿಪುರ ಸುಂದರಿ ಅಭಯಂಕರಿ” ಎಂಬ ದೇವಿಯ ಗೀತೆಯೊಂದಿಗೆ ಪ್ರಾರ್ಥನೆಯಾಯಿತು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಸರ್ವರಿಗೂ ಸ್ವಾಗತ ಕೋರಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ರೋಟರಿ ಕಾರ್ಯಚಟುವಟಿಕೆಗಳ ವರದಿ ನೀಡಿದರು. ದಿನಾಂಕ: 23.02.2025 ರಂದು ನಡೆಯುವ ವಿಶ್ವ ಅರಿವಿನ ದಿನಾಚರಣೆಯ ವಿವರಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಅಂದಿನ ಸಭೆಯ ಉಪಹಾರದ ವ್ಯವಸ್ಥೆಯನ್ನು ಮಾಡಿದ ಹಾಗೂ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡ ರೊ.ಎಂ. ಮಾಧವಾಚಾರ್ ಹಾಗೂ ಸುಧಾ ಮಾಧವಾಚಾರ್ ದಂಪತಿಗಳನ್ನು ವೇದಿಕೆಗೆ ಆಹ್ವಾನಿಸಿ, ಶುಭಾಶಯಗಳನ್ನು ಕೋರಲಾಯಿತು.

ರೋಟರಿ ಕ್ಲಬ್ ಶಿವಮೊಗ್ಗ ಸೆಂಟ್ರಲ್‌ನಿಂದ ದಿನಾಂಕ:09.02.2023 ರಂದು ರಾಷ್ಟ್ರ ಕಾರ್ಯಕ್ರಮ ಏರ್ಪಾಡಾಗಿದ್ದು ನಮ್ಮ ಕ್ಲಬ್‌ನ ಸದಸ್ಯರು ಪಾಲ್ಗೊಳ್ಳಬೇಕೆಂದು ಸೆಂಟ್ರಲ್ ಕ್ಲಬ್ ಅಧ್ಯಕ್ಷರಾದ ರೊ. ಕಿರಣ್‌ಕುಮಾರ್ ತಮ್ಮ ತಂಡದವರೊಂದಿಗೆ ಆಗಮಿಸಿ ಮನವಿ ಮಾಡಿದರು.

ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಮಾತನಾಡಿ, ಜನವರಿ 24,25 ಮತ್ತು 26 ರಂದು ಇತ್ತೀಚೆಗೆ ಉಡುಪಿಯ ಅಂಬಾಗಿಲಿನಲ್ಲಿ ನಡೆದ ರೋಟರಿ ಸಮ್ಮೇಳನದ ನೆನಪುಗಳನ್ನು ಮೆಲುಕು ಹಾಕಲು ಇಲ್ಲಿ ಸೇರಿದ್ದೇವೆ ಎಂದು ಸದಸ್ಯರುಗಳಿಗೆ ಅವಕಾಶ ನೀಡಿದರು.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ: 12–02–2025, ಬುಧವಾರ ಸಂಜೆ 6:45**

**Chief Guest:**

**K.V. Vasanth Kumar, Past Zone President, JCI**

**Topic:**

**Conflict Management / Prevention**

**ಸಂಘರ್ಷ ನಿರ್ವಹಣೆ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

ಮೊದಲಿಗೆ ರೊ.ರಮಾಗೋಪಾಲ್‌ರವರು ಬಹು ವಿಸ್ತಾರವಾಗಿ ಅಂದರೆ ಹೋಟೆಲ್ ಶುಭಂನಿಂದ ಹೊರಟು ಪುನಃ ಶಿವಮೊಗ್ಗೆಗೆ ಆಗಮಿಸುವ ತನಕದ ಎಲ್ಲಾ ವಿವರಗಳನ್ನು ತಿಳಿಸಿದರು. ಎಲ್ಲರೂ ತುಂಬಾ ಖುಷಿಯಾಗಿ ಸಮ್ಮೇಳಕ್ಕೆ ಹೋಗಿ ಬಂದಿದ್ದೇವೆ. ಬಸ್ ಹೊರಟ ಮೇಲೆ ಅಂತ್ಯಾಕ್ಷರಿಯೊಂದಿಗಿನ ಮನರಂಜನೆ ಉಚಿಲ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಭರ್ಜರಿ ಭೋಜನ ನಂತರ ಉಡುಪಿಗೆ ಆಗಮನ. ಸಮ್ಮೇಳನದ ಸಭಾಂಗಣದಲ್ಲಿ ಅಂದಿನ ಸಂಜೆ ಮನಸಿಗೆ ಹಿತವಾದ ಮನರಂಜನೆ ವಿಶೇಷವಾಗಿ ಹುಲಿವೇಷದ ಕುಣಿತಗಳು ಚೆನ್ನಾಗಿತ್ತು. ತರಹೇವಾರಿ ತಿಂಡಿಗಳು. ಸಾಂಸ್ಕೃತಿಕ ಹಬ್ಬ ಗಂಡಸರಿಗೆ ಹಾಡುಕುಣಿತವಿದ್ದ ಹಬ್ಬ. ಮಾರನೇಯ ದಿನ ಬೇಗ ಮುಂಜಾನೆದ್ದು ಶ್ರೀ ಕೃಷ್ಣನ ಸನ್ನಿಧಿಗೆ ಹಾಗೂ ಅನಂತೇಶ್ವರ ದೇವಳಕ್ಕೆ ಭೇಟಿ. ಪ್ರತಿಯೊಬ್ಬರೂ ಶಿಸ್ತಿನಿಂದ ಉತ್ತಮವಾದ ಧಿರಿಸಿನೊಂದಿಗೆ ಸಮ್ಮೇಳನದಲ್ಲಿ ಪಾಲ್ಗೊಂಡೆವು. ಆಗಮಿಸಿದ ಸಂಪನ್ಮೂಲ ವ್ಯಕ್ತಿಗಳು ಚೆನ್ನಾಗಿ ಮಾತನಾಡಿದರು. ಅಲ್ಲಿ ನಾವೆಲ್ಲಾ ಒಂದೇ ಕುಟುಂಬದವರಂತೆ ಇದ್ದೆವು. ಸಮ್ಮೇಳನ ಮುಗಿಸಿ ವಾಪಾಸ್ಸಾಗುವಾಗ ತುಂಬಾ ಸಂತೋಷದಿಂದ ವಾಪಾಸಾದೆವು. ಹೆಬ್ರಿ ಬಳಿ ನದಿಯಲ್ಲಿ ದೋಣಿ ವಿಹಾರ ಅಲ್ಲಿ ತೀರ್ಥಂಕರರ ದೇವಳಗಳಿಗೆ ಭೇಟಿ. ಅಲ್ಲಿ ಗಂಡಸರಿಗೆ ಮಾತ್ರ ಪ್ರವೇಶವಿದ್ದರೂ, ನಾನು ಅಧ್ಯಕ್ಷರ ಅಂಗಿಯನ್ನು ಧರಿಸಿ ಎಲ್ಲಾ ದೇವಳಗಳಿಗೆ ಭೇಟಿ ನೀಡಿದೆ.ಇದು ನನಗೆ ತುಂಬಾ ಸಂತೋಷ ತಂದಿದೆ. ಶ್ರೀಮತಿ ಶೀಲಾ ಶೈಲಿನ್‌ರವರು ತಮ್ಮ ವಿವಾಹ ವಾರ್ಷಿಕೋತ್ಸವದ ನಿಮಿತ್ತ ಉಪಹಾರದ ವ್ಯವಸ್ಥೆ ಮಾಡಿದರು. ಮತ್ತೆ ಶಿವಮೊಗ್ಗೆಗೆ ಬಂದಾಗ ಹಳೆಯ ನೆನಪುಗಳು ನಮ್ಮನ್ನು ಮೆಲುಕು ಹಾಕಿವೆ. ಈ ಎಲ್ಲಾ ನೆನಪುಗಳು ಮರೆಯಲಾರದಂತಹುವುಗಳು ಎಂದರು.

ರೊ. ಎನ್.ವಿ.ಭಟ್‌ರವರು ಮಾತನಾಡಿ, ಅಂದಿನ ಸಮ್ಮೇಳನದಲ್ಲಿ ಹಲವಾರು ಸಂಪನ್ಮೂಲ ವ್ಯಕ್ತಿಗಳು ಪಾಲ್ಗೊಂಡು ಚೆನ್ನಾಗಿ ಮಾತನಾಡಿದ್ದಾರೆ. ಟಿ.ಆರ್.ಎಫ್ ಟ್ರಸ್ಟಿ ರೊ.ಡಾ. ಭರತ್ ಪಾಂಡೆಯವರು ರೋಟರಿಯ ವಿಚಾರಗಳು ಹಾಗೂ ಹೊಸ ಸದಸ್ಯರನ್ನು ಹೇಗೆ ಕ್ಲಬ್‌ಗಳಲ್ಲಿ ಉಳಿಸಿಕೊಳ್ಳಬೇಕು ಇತ್ಯಾದಿ ವಿಚಾರಗಳನ್ನು ಪ್ರಸ್ತಾಪಿಸಿದರು. ರೊಪಿಡಿಜಿ. ಮಂಜು ಫಡಕೆಯವರು ಮತನಾಡುತ್ತಾ ವಿಶ್ವ ಸಂಸ್ಥೆ ಉಗಮವಾಗಲು ರೋಟರಿಯು ಸಹ ಕಾರಣ ಎಂಬುದರ ವಿವರಣೆ ನೀಡಿದರು. ಪ್ರಸಿದ್ಧ ಬಾಲಿವುಡ್ ನಟ ಶ್ರೀ ದಯಾ ಶೆಟ್ಟಿಯವರು ಉದ್ಘಾಟನೆಯನ್ನು ಮಾಡಿದರು. ಅವರೊಂದಿಗೆ ಪೋಲಿಸ್ ಅಧಿಕಾರಿ ಪ್ರದ್ಯುಮ್ನರವರೂ ಉಪಸ್ಥಿತರಿದ್ದರು.

ಖ್ಯಾತ ಅಂತರರಾಷ್ಟ್ರೀಯ ಪ್ಯಾರಾ ಒಲಿಂಪಿಕ್ ಅಥ್ಲೆಟ್ ಪದ್ಮಶ್ರೀ ಡಾ. ಮಾಲತಿ ಹೊಳ್ಳರವರು "ಕಠಿಣ ಸವಾಲುಗಳೆಡೆಗೆ ಧೈರ್ಯ ಮತ್ತು ಸ್ವಯಂ ವಿಶ್ವಾಸದ ನನ್ನ ನಡೆ" ಎಂಬ ವಿಚಾರದ ಬಗ್ಗೆ ಮಾತನಾಡುತ್ತಾ ಅವರ ಪೋಷಕರಿಗೆ ಒದಗಿ ಬಂದ ತೊಂದರೆಗಳು ಹಾಗೂ ತಾನು ಸಾಧಿಸಿದ ಮುನ್ನಡೆಗಳ ಬಗ್ಗೆ ತಿಳಿಸಿ, ಹಾಲಿ ತಾನು ಮಾತೃ ಫೌಂಡೇಷನ್ ಎಂಬ ಸಂಸ್ಥೆ ನಡೆಸುತ್ತಿದ್ದು, ಅದರಲ್ಲಿ ಸುಮಾರು 53 ವಿಕಲ ಚೇತನ ಮಕ್ಕಳು ನನ್ನ ಸುಪರ್ದಿಯಲ್ಲಿದ್ದಾರೆ ಎಂದಿರುವುದನ್ನು ಭಟ್‌ರವರು ತಿಳಿಸಿದರು. ರೊ. ಎನ್.ವಿ.ಭಟ್‌ರವರುಡಾ ಮಾಲತಿಹೊಳ್ಳರವರೊಂದಿಗೆ ನಮ್ಮ ಆಶಾಕಿರಣದ ಮಕ್ಕಳ ಬಗ್ಗೆ ಪ್ರಸ್ತಾಪಿಸಿದ ಮಾಹಿತಿ ನೀಡಿದರು.

ಡಾ. ಅನಂತಪ್ರಭುರವರು ಸೈಬರ್ ಸೆಕ್ಯುರಿಟಿ ಮತ್ತು ಟ್ರೂಕಾಲರ್ ಬಳಕೆ ಬಗ್ಗೆ ಮಾತನಾಡಿದ್ದು, ಕುದ್ರೋಳಿ ಗಣೇಶರವರ ಮ್ಯಾಜಿಕ್ ಷೋ ಚೆನ್ನಾಗಿತ್ತು. ಬಸವನಬಾಗೇ ವಾಡಿಯ ಅಶೋಕ್ ಹೆಚ್.ಎಲ್. ಸಿಂಪತಿ ಮತ್ತು ಎಂಪತಿ ಬಗ್ಗೆ ನಮ್ಮ ಸಮಾಜದ ಬಗ್ಗೆ ಮಾತನಾಡಿದರು.

ರೊ.ಎನ್.ಎಸ್. ಶ್ರೀಧರ್‌ರವರು ರೋಟರಿಯ ಕಟ್ಟಡದ ಬಗ್ಗೆ ಮಾತನಾಡಿ ರೂ.25000.00 ದೇಣಿಗೆ ನೀಡಿದವರ ಹೆಸರನ್ನು ಹಾಕಲಾಗುವುದು. ಅಲ್ಲದೇ ಸಭಾಂಗಣದಲ್ಲಿ ಒಬ್ಬೊಬ್ಬ ಸದಸ್ಯರ ಹೆಸರಿಗೆ ಒಂದೊಂದು ಸ್ಟೀಲ್ ಚೇರ್ ಸಂಗ್ರಹ ಮಾಡಲಾಗುವುದು ಎಂದರು. ಸ್ಥಳದಲ್ಲೇ ರೊ.ರಮಾಗೋಪಾಲ್ ತಾವುಎರಡು ಚೇರ್‌ಗಳನ್ನು ನೀಡುವುದಾಗಿ ವಾಗ್ದಾನ ಮಾಡಿದರು. ಅಧ್ಯಕ್ಷರು ಮಾತನಾಡಿ ಈಗಾಗಲೇ ರೂ.1,90,000.00 ಬಂದಿದ್ದು ಅದು ಕಟ್ಟಡದ ಅಭಿವೃದ್ಧಿಗೆ ವಿನಿಯೋಗವಾಗುತ್ತದೆ ಎಂದರು.

ರೊ. ಶಾರದಾಗೋಪಾಲ್‌ರವರು ಮಾತನಾಡಿ ಶ್ರೀ ರಾಜಗೋಪಾಲ ಜೋಷಿಯವರು ಮನುಷ್ಯನ ಮೂರನೇ ಕಣ್ಣಿನ ಬಗ್ಗೆ ಮಾತನಾಡಿದುದನ್ನು ಪ್ರಸ್ತಾಪಿಸಿದರು. ಕಣ್ಣು ಮುಚ್ಚಿ ಧ್ಯಾನದಲ್ಲಿ ಕುಳಿತುಕೊಂಡಲ್ಲಿ ಮೂರನೇ ಕಣ್ಣಿನ ಮೂಲಕ ಎಲ್ಲವನ್ನು ನೋಡಲು ಸಾಧ್ಯ ಎಂದರು. ಅದರಲ್ಲೂ ಚಿಕ್ಕಮಕ್ಕಳಿಗೆ ಇವು ಬೇಗ ಸಾಧ್ಯವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ರೊ.ಪಿಡಿಜಿ. ಡಾ. ಆರ್.ಡಿ.ಪ್ರಭುರವರು ಮಾತನಾಡಿ, ಸಭೆಯ ಸಮಯ ಮುಂದೇ ಹೋಗುತ್ತಿದೆ. ಸರಿಯಾದ ಸಮಯಕ್ಕ ಪ್ರಾರಂಭ ಮಾಡಿ, ಸಮಯಕ್ಕೆ ಸರಿಯಾಗಿ ಮುಕ್ತಾಯಗೊಳಿಸಿ ಎಂದು ಸಲಹೆ ನೀಡಿದರು.ಇದೇ ಸಂದರ್ಭದಲ್ಲಿ ರೋಟರಿ ಜಿಲ್ಲಾ ಸಮ್ಮೇಳನದ ನೆನಪಿನ ಕಾಣಿಕೆಗಳನ್ನು ರೊ.ಪೇಟೆ ಅಜಯಕುಮಾರ್ ಮತ್ತುರೊ.ಎಸ್. ಮಂಜುನಾಥರವರಿಗೆ ವೇದಿಕೆಯಲ್ಲಿ ನೀಡಲಾಯಿತು.


ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಸಮ್ಮೇಳನದ ಅನುಭವಗಳನ್ನು ಇಂದು ನಮ್ಮ ಕೆಲವು ಸದಸ್ಯರುಗಳು ಹಂಚಿಕೊಂಡಿದ್ದಾರೆ. ಮುಂದೆ ನಾವು ಪಿಕ್‌ನಿಕ್ ಒಂದನ್ನು ಆಯೋಜಿಸುವ ಅಂದಾಜಿದೆ. ಹಾಗೆ ಸದಸ್ಯರುಗಳು ರಾಹ್ಲದಲ್ಲೂ ಭಾಗವಹಿಸಿ ಎಂದು ಮನವಿ ಮಾಡಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವಂದನಾರ್ಪಣೆ ಮಾಡಿದರು. ವಿಶೇಷವಾಗಿ ಉಪಹಾರದ ವ್ಯವಸ್ಥೆ ಮಾಡಿದ್ದ ರೊ.ಮಾಧವಾಚಾರ್‌ರವರಿಗೆ ವಂದನೆ ಸಲ್ಲಿಸಿದರು. ನಂತರ ರಾಷ್ಟ್ರಗೀತೆಯೊಂದಿಗೆ ರೊ.ವೈ.ವಿ.ವೆಂಕಟರಮಣ ಜೋಯ್ಸ್‌ರವರ ಭಾರತ ಮಾತಾ ಕಿ ಜೈ ಉದ್ಘೋಷದೊಂದಿಗೆ ಸಭೆ ಮುಗಿಯಿತು. ❖








**Career guidance training program for 10th standard students on 30-01-2025 JC trainer Chandrasekhar gave training about the job opportunities based on various subject.**




**RAHLA** ಇದು ಒಂದು ದಿನದ ಕಾರ್ಯಕ್ರಮ ಈ ತಿಂಗಳ 16 ರಂದು ಕಾಸ್ಮೋಕ್ಲಬ್‌ನಲ್ಲಿ ನಡೆಯುತ್ತದೆ. **1) KNOW YOUR POTENTIAL 2) HARMONY IN LIFE 3) LEADING IS OUR DUTY** ಎಂಬ ವಿಷಯಗಳ ಬಗ್ಗೆ ವಿಶೇಷ ಉಪನ್ಯಾಸ ಇರುತ್ತದೆ.

ಈ ಕಾರ್ಯಕ್ರಮಕ್ಕೆ ರೋಟರಿ ಸದಸ್ಯರು ತಮ್ಮ ಕುಟುಂಬದ ಸದಸ್ಯರೊಂದಿಗೆ ನೋಂದಣಿ ಮಾಡಿಸಿ. ರೋಟರಿ ಸದಸ್ಯರಿಗೆ ನೋಂದಣಿ ಶುಲ್ಕ ರೂ. 750/– ಹಾಗೂ ಆನ್ಸ್ ಮತ್ತು ಮಕ್ಕಳಿಗೆ, ರೋಟರ್‍ಯಾಕ್ಟ್ ಸದಸ್ಯರಿಗೆ ರೂ. 300/–



Know Your Potential

C.C. Pawate, born in 1965 at Dharwad is a dedicated social worker from Siddapur, Karwar District. He has trained over 100,000 people in personality development, motivated 30,000 youths, and delivered 3,000 talks. Focusing on rural development, he has promoted organic farming in 7,000 villages and established counseling centres. Pawate has authored 20+ books and received awards for his work. He engages with schools, colleges, and the media, serving on various committees and consulting for organizations. Notably, he shifted a group from woodcutting to animal husbandry, preserving forest land, and rehabilitated violent youths into responsible citizens.

Harmony in Life

Dr. K. Shreepathi Halagunda was born in 1974 at Halagunda village of Hosanagara Taluk, Shimogga Dist. His mother is Smt. Gangamma, father Krishnappa Gowda. He got first rank in M A Kannada literature. He got Ph.D. degree from Kuvempu University. Title of the thesis is 'Kannada Kadambarigalalli Veshya Jeevana'. At present he is working as Associate Professor in Kannada at Government First Grade College, Hosanagara. He has written more than 30 books in Kannada. Some of his books are translated to English and Malayalam. He has delivered more than 1000 talks all over Karnataka. Some of his books got State Award. One of his poems "Sunamiya Suliyalli" is being proscribed as text to Mangalore university degree students. He got guideship at Hampi University for Ph.D. students.

Leading is Our Duty

Rtn. N.G. Usha, M.A.,B.ED., Dip. in HRD
Retired Vice Principal
Vasavi Public School, Shimoga.

Recipient of State Level and National Level Best Teacher Award.
Secretary, Rotary Club, Shimoga.
Vice President of Senior Chamber International.
Past President of Bhavana JC and Inner Wheel Club.
JCI Professional Trainer.






ದಿನಾಂಕ: 01–02–2025 ರಂದು ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಕೋಟೆ ಪೊಲೀಸ್ ಸ್ಟೇಷನ್ ಆವರಣದಲ್ಲಿ ವಾಸವಿ ಇಂಟರ್‍ಯಾಕ್ಟ್ ವಿದ್ಯಾರ್ಥಿಗಳೊಂದಿಗೆ ನಡೆದ ಕಾರ್ಯಕ್ರಮದಲ್ಲಿ ನಮ್ಮ ರೋಟೇರಿಯನ್ಸ್ ಭಾಗವಹಿಸಿದ್ದರು.







ದಿನಾಂಕ: 31–01–2025 ರಂದು ರೋಟರಿ ಕ್ಲಬ್ ಶಿವಮೊಗ್ಗ, ರೋಟರ್‍ಯಾಕ್ಟ್ ಕ್ಲಬ್ ಸಹಯೋಗದಲ್ಲಿ ಉಚಿತ ಪಶು ಆರೋಗ್ಯ ತಪಾಸಣೆ ಶಿಬಿರ ಹಾಗೂ ಔಷಧಿ ವಿತರಣೆ ಕಾರ್ಯಕ್ರಮವನ್ನು ಮಹಾವೀರ ಗೋಶಾಲೆಯಲ್ಲಿ ಏರ್ಪಡಿಸಲಾಗಿತ್ತು.



## ಸಂಪಾದಕೀಯ

### ನಾಲಿಗೆ ಮೇಲಿನ ಮಾತು...!

ಪ್ರೊ. ಪ್ರಭುಶಂಕರ ಅವರು ಹೇಳಿದ ಒಂದು ತಮಾಷೆಯ ಪ್ರಸಂಗ ಇದು. ಕೇಳಿ, ಸಾಹೇಬರೊಬ್ಬರಿಗೆ ವರ್ಗ ಆಗಿತ್ತು. ಅದರ ನಿಮಿತ್ತವಾಗಿ ಆ ಕಚೇರಿಯಲ್ಲಿ ಸಾಹೇಬರಿಗೊಂದು ಬೀಳ್ಕೊಡುಗೆ ಸಮಾರಂಭ. ನೂರಾರು ಜನ ಕೆಲಸ ಮಾಡುವಾ ಕಚೇರಿ ಅದು. ಅಂಥ ಸಮಾರಂಭಗಳು ಹೇಗಿರುತ್ತವೆ ಅಂತ ನಿಮಗೂ ಬಹುಶಃ ಗೊತ್ತು. ಒಂದು ದೇವತಾ ಪ್ರಾರ್ಥನೆ, ಸ್ವಾಗತ, ಅಮೇಲೊಂದು ಅಭಿನಂದನಾ ಭಾಷಣ. ಆ ಭಾಷಣದಲ್ಲಿ ವರ್ಗ ಆದ ಸಾಹೇಬರು ಅದೆಷ್ಟು ಮೇಧಾವಿಗಳು, ಪ್ರಾಮಾಣಿಕರು, ಅವರ ಶಿಸ್ತು, ಶ್ರದ್ಧೆ, ಬದ್ಧತೆಯನ್ನೆಲ್ಲಾ ಸೋದಾಹರಣವಾಗಿ ನಿರೂಪಿಸಿ, ಇಂಥ ಮಹನೀಯರು ಇರುವುದರಿಂದಲೇ ಇನ್ನೂ ಲೋಕದಲ್ಲಿ ಮಳೆ ಬೆಳೆ ಆಗುತ್ತಿದೆ ಎನ್ನುವ ರೇಂಜಿಗೆ ಕೊಂಡಾಡುವುದು, ಆಮೇಲೆ ಹೆಗಲಿಗೊಂದು ಶಾಲು, ತಲೆಗೊಂದು ಪೇಟ ಹಾಕಿ, ಕೈಗೊಂದು ಹಣ್ಣಿನ ಬುಟ್ಟಿ, (ಸಾಧ್ಯವಾದರೆ) ಒಂದು ನೆನಪಿನ ಕಾಣಿಕೆ ಕೊಡುವುದು... ಹೀಗೇ ತಾನೇ? ಎಲ್ಲಾ ಹಾಗೇ ವ್ಯವಸ್ಥೆ ಆಗಿತ್ತು. ಸಂಜೆ ನಾಲ್ಕು ಗಂಟೆಗೆ ಸಮಾರಂಭ.

ಸುಮಾರು ಮೂರು ಗಂಟೆಯ ಹೊತ್ತಿಗೆ ಸಾಹೇರಿಗೆ ಶೌಚಾಲಯಕ್ಕೆ ಹೋಗಬೇಕಾದ ಒತ್ತಡ ಸೃಷ್ಟಿಯಾಯಿತು. ಅವರು ಶೌಚಾಲಯದೊಳಗೆ ಇರುವಾಗಲೇ ಕಛೇರಿಯ ಮೂರ್ನಾಲ್ಕು ಸಿಬ್ಬಂದಿ ಆ ಕಡೆ ಬಂದರು. ಅವರಿಗೆ ಸಾಹೇಬರು ಶೌಚಾಲಯದೊಳಗೆ ಇರುವುದು ಗೊತ್ತಿಲ್ಲ. ಅವರಲ್ಲೊಬ್ಬ ಮತ್ತೊಬ್ಬನನ್ನು ಕೇಳಿದ. 'ಏನ್ರೀ ರಾಮನಾಥ್, ಅಭಿನಂದನಾ ಭಾಷಣಕ್ಕೆ ಎಲ್ಲಾ ಸಿದ್ಧಾನೋ?'

ರಾಮನಾಥ್ ಹೇಳಿದ: 'ಈ ಪಾಪಿಗೆ ಅಭಿನಂದನಾ ಭಾಷಣ ಮಾಡೋದು ಏನ್ ಕರ್ಮ ಅಲ್ವ? ಥೂ, ಮನುಷ್ಯನೇನ್ರಿ ಅವರು? ಅದ್ಯಾವ ಸುಡುಗಾಡು ಯೂನಿವರ್ಸಿಟಿ ಈ ಅವಿವೇಕಿಗೆ ಡಿಗ್ರಿ ಕೊಡ್ತೋ ಕಾಣೆ. ಜಂಭ ಮಾತ್ರ ಇಡೀ ಒಂದೂರಿಗೇ ಹಂಚೋ ಅಷ್ಟಿದೆ. ಸದ್ಯ, ಪೀಡೆ ತೊಲಗ್ತಾ ಇದೆ..' ಹೀಗೆ ಮಾತಾಡುತ್ತಾ ಅವರೆಲ್ಲಾ ಶೌಚ ಕಾರ್ಯ ಮುಗಿಸಿ ಹೊರಗಡೆ ಹೋದರು. ಅವರ ಪ್ರತೀ ಮಾತೂ ಒಳಗೇ ಇದ್ದ ಸಾಹೇಬರ ಮರ್ಮಕ್ಕೆ ತಾಕಿತ್ತು.

ಬೀಳ್ಕೊಡುಗೆ ಸಮಾರಂಭ ಆರಂಭವಾಯಿತು. ಸಾಹೇಬರಿಗೆ ಅಭಿನಂದನಾ ಭಾಷಣ ಕೂಡಾ ನಡೆಯಿತು. ಕಾರ್ಯಕ್ರಮ ಮುಗಿದ ಮೇಲೆ ರಾಮನಾಥ್ ಸಾಹೇಬರನ್ನು ಕೇಳಿದ; 'ಹೇಗಿತ್ತು ಸಾರ್ ನನ್ನ ಭಾಷಣ? ಎಲ್ಲಾ ಸರಿಯಾಗಿ ಹೇಳಿದ್ನಾ? '

ಸಾಹೇಬರು ಹೇಳಿದರು, 'ನಾಲಿಗೆ ಮೇಲಿನ ಮಾತು ಮಾತಲ್ಲ ರಾಮನಾಥ್, ಮನಸಿನ ಮಾತು ಕೇಳಿಸ್ಕೋಬೇಕು ನಾನು ಕೇಳಿಸಿಕೊಂಡಿದ್ದೇನೆ.'

ಮನಸಿನ ಮಾತು ಕೇಳಿಸ್ಕೋಬೇಕು, ಹೌದಲ್ಲ !

• ರೊ. ಎಂ. ಮಾಧವಾಚಾರ್

## Happy Birthday Wishes



Dr Narayan Panji
04th Feb



Vasanth U Sastry
06th Feb



Dr. Nirmala H. T.
11th Feb



Shobha
12th Feb.




## ಚಿಂತನ

**ಬೇಡದ ಚಿಂತನೆಗಳಲ್ಲಿ ನಕಾರಾತ್ಮಕ ವಿಷಯಗಳ ಚರ್ಚೆಯಲ್ಲಿ ಸಮಯವನ್ನು ಹಾಳು ಮಾಡಿದರೆ ಬದುಕನ್ನು ಗುಣಾತ್ಮಕವಾಗಿಸಿಕೊಳ್ಳುವುದಕ್ಕೆ ಸಿಕ್ಕಿರುವ ಅವಕಾಶವೊಂದು ತಪ್ಪಿದಂತಾಗುತ್ತದೆ.**

**ಪ್ರೀತಿ, ವಿಶ್ವಾಸ, ಸ್ನೇಹದಿಂದ ಖುಷಿ ಹಂಚೋಣ ಬನ್ನಿ.**

– ರೊ. ಕೆ. ಸೂರ್ಯನಾರಾಯಣ ಉಡುಪ

To,

*Book Post*